

# ದೇವರ ಆಯ್ಕೆ

ವಿಶ್ವ ವಿಖ್ಯಾತ ಟೆನ್ನಿಸ್ ಆಟಗಾರ ಆರ್ಥರ್ ಆ್ಯಶ್ ಏಡ್ಸ್ ರೋಗದಿಂದ ಬಳಲುತ್ತಿದ್ದರು. ಈ ವಿಷಯ ತಿಳಿದು ಆಘಾತಕ್ಕೊಳಗಾದ ಅಸಂಖ್ಯಾತ ಅಭಿಮಾನಿಗಳಿಂದ ಸಂದೇಶ ಪತ್ರಗಳು ಬರುತ್ತಿದ್ದವು. ಒಬ್ಬ ಅಭಿಮಾನಿ, 'ಈ ಮಾರಣಾಂತಿಕ ರೋಗಕ್ಕೆ ಆ ದೇವರು ನಿಮ್ಮನ್ನೇ ಏಕೆ ಆಯ್ಕೆ ಮಾಡಿಕೊಂಡ?' ಎಂದು ಅಳಲು ತೋಡಿಕೊಂಡಿದ್ದ, ಅನುಕಂಪದ ಪತ್ರದಲ್ಲಿ.

ಆ ಪತ್ರಕ್ಕೆ ಆರ್ಥರ್ ಆ್ಯಶ್ ನೀಡಿದ ಮಾರುತ್ತರ ಈ ಕೆಳಗಿನಂತಿತ್ತು.

50 ದಶಲಕ್ಷ ಮಕ್ಕಳು ಟೆನ್ನಿಸ್ ಆಟ ಕಲಿಯಲಾರಂಭಿಸಿದರು. ಅದರಲ್ಲಿ 5 ದಶಲಕ್ಷ ಮಂದಿ ಒಳ್ಳೆಯ ಟೆನಿಸ್ ಆಟಗಾರರಾದರು. ಇವರಲ್ಲಿ 5 ಲಕ್ಷ ಆಟಗಾರರನ್ನು ವೃತ್ತಿಪರ ಟೆನ್ನಿಸ್ ಆಟಗಾರರೆಂದು ಗುರುತಿಸಲಾಯಿತು. ಈ 5 ಲಕ್ಷ ವೃತ್ತಿಪರ ಆಟಗಾರರಲ್ಲಿ 50 ಸಾವಿರ ಮಂದಿ ಮಾತ್ರ ಉತ್ತಮ ಆಟಗಾರರೆಂದು ಪರಿಗಣಿಸಲ್ಪಟ್ಟರು. ಅವರಲ್ಲಿ 5 ಸಾವಿರ ಆಟಗಾರರು ಮಾತ್ರ ಗ್ರ್ಯಾಂಡ್ ಸ್ಲ್ಯಾಮ್ ತಲುಪಿದರು. ಈ 5 ಸಾವಿರ ಆಟಗಾರರ ಪೈಕಿ 50 ಆಟಗಾರರು ಮಾತ್ರ ವಿಂಬಲ್ಡನ್ ತಲುಪಿದರು. ಈ 50 ಆಟಗಾರರ ಪೈಕಿ ಕೇವಲ ನಾಲ್ಕು ಮಂದಿಯನ್ನು ಸೆಮಿಫೈನಲ್ಸ್‌ಗೆ ಆಯ್ಕೆ ಮಾಡಲಾಯಿತು. ಸೆಮಿಫೈನಲ್ ಪಂದ್ಯಗಳಲ್ಲಿ ಸೆಣಸಿದ ನಾಲ್ಕು ಆಟಗಾರರಲ್ಲಿ ಇಬ್ಬರು ಫೈನಲ್ ಪಂದ್ಯದಲ್ಲಿ ಆಡಲು ಅರ್ಹತೆ ಪಡೆದರು. ಆ ಇಬ್ಬರಲ್ಲಿ ನಾನೂ ಒಬ್ಬನಾಗಿದ್ದೆ. ಫೈನಲ್ ಪಂದ್ಯ ಮುಗಿದಾಗ 'ವಿಶ್ವಕಪ್'ನನ್ನ ಕೈ ಸೇರಿತ್ತು. ಆಗ ನಾನು ದೇವರನ್ನು 'ನಾನೇ ಏಕೆ'? ಎಂದು ಕೇಳಲಿಲ್ಲ. ಆಗ ದೇವರು ಆ ಪ್ರಶಸ್ತಿಗೆ, ಗೌರವಕ್ಕೆ ನನ್ನನ್ನೇ ಆಯ್ಕೆ ಮಾಡಿದ್ದನಲ್ಲ. ಹಾಗಿರುವಾಗ ಈಗ ನಾನು ದೇವರನ್ನು 'ನಾನೇ ಏಕೆ'? ಎಂದು ಹೇಗೆ ಕೇಳಲಿ?

**-ಹ್ಯಾಡ ಬ.ಜಯಾನಂದ, ಮೈಸೂರು**

## ನಿಮಗೆಷ್ಟು ಗೊತ್ತು

## ಕುತೂಹಲಗಳ ಆಗರ ಕಕಾಪೊ ಗಿಳಿ



ಸ್ಟ್ರಿಗೋಪ್ಸ್ ಹ್ಯಾಬ್ರೋಪ್ಟಿಲಾ ಎಂಬ ವೈಜ್ಞಾನಿಕ ನಾಮಧೇಯವುಳ್ಳ ಕಕಾಪೊ ಗಿಳಿಗಳು ಅನೇಕ ಕಾರಣಗಳಿಗಾಗಿ ಸಾಕಷ್ಟು ಕುತೂಹಲವನ್ನು ಪಕ್ಷಿಪ್ರೇಮಿಗಳಲ್ಲಿ ಮೂಡಿಸಿವೆ. ಇವುಗಳು ಗಿಳಿಗಳ ಪ್ರಬೇಧಕ್ಕೆ ಸೇರಿದ್ದರೂ ಸಹ ಇತರೆಲ್ಲಾ ಗಿಳಿಗಳಿಗಿಂತಲೂ ವಿಶೇಷವಾಗಿ ಗುರ್ತಿಸಲ್ಪಟ್ಟಿದ್ದು, ಇವುಗಳಿಗೆ ಗೂಬೆ ಗಿಳಿ ಅಂತಲೂ ಕರೆಯಲಾಗುತ್ತದೆ. ಇವುಗಳು ಗಿಳಿಗಳಲ್ಲೇ ಅತೀ ದೊಡ್ಡಗಾತ್ರದ ಗಿಳಿಗಳೆಂದೂ ಪ್ರಸಿದ್ಧಿ ಪಡೆದಿದ್ದು ಮತ್ತೊಂದು ವಿಶೇಷವೆಂದರೆ ಇವುಗಳು ಹಾರುವುದಿಲ್ಲ. ಅದಕ್ಕಾಗಿ ಇವುಗಳಿಗೆ ಹಾರಲಾರದ ಗಿಳಿಗಳು ಎಂದೂ ಕರೆಯಲಾಗುವುದು. ಜಗತ್ತಿನಲ್ಲಿ ಹಾರಲಾರದ ಗಿಳಿಗಳೆಂದರೆ ಕಕಾಪೊಗಳು ಮಾತ್ರವೇ.

ಉತ್ತಮ ವಾಸನಾ ಗ್ರಹಣಾ ಸಾಮರ್ಥ್ಯವನ್ನೂ ಹೊಂದಿರುವ ಈ ಗಿಳಿಗಳು ತಮ್ಮ ದೇಹದಲ್ಲಿ ಸಾಕಷ್ಟು ಪ್ರಮಾಣದ ಕೊಬ್ಬನ್ನು ಸಂಗ್ರಹಿಸಿಟ್ಟುಕೊಳ್ಳುವ ಮೂಲಕ ದೈತ್ಯ ಗಿಳಿಗಳೆಂಬ ಹೆಸರು ಪಡೆದಿವೆ. ಸರಾಸರಿ 95– 120 ವರ್ಷಗಳಷ್ಟು ದೀರ್ಘಾವಧಿಯ ಜೀವಿತಾವಧಿಯನ್ನು ಹೊಂದಿರುವ ಕಕಾಪೊಗಳು ಪಕ್ಷಿಜಗತ್ತಿನಲ್ಲಿಯೇ ದೀರ್ಘಾಯುಷ್ಯ ಹೊಂದಿದ ಪಕ್ಷಿಗಳೂ ಹೌದು.

(ಸಂಗ್ರಹ)

**ಪ.ನಾ.ಹಳ್ಳಿ.ಹರೀಶ್ ಕುಮಾರ್**